# ಟೊಂಯಾ ಮರಿ ಮಾಡಿದ್ದು

ಟೊರ್ನವೆಂಟ್ ಊರಿನ ಸುತ್ತಮುತ್ತಲ ಹತ್ತು ಹಳ್ಳಿಗಳಲ್ಲಿ ಟೊಂಯಾ ಉರುಫ್ 'ಡೊಳ್ಳೊಟ್ಟೆ ಟೊಂಯಾ'ನನ್ನು ಗುರುತಿಸದಿರದವರೇ ಇರಲಿಲ್ಲವೆನ್ನಬಹುದಿತ್ತೇನೋ? ಅವನ ಪೂರ್ಣ ಹೆಸರು ಅಂಟೊಯ್ನ್. ಚುಟುಕಾಗಿ ಅವನನ್ನು ಟೊಂಯಾ ಅಂತಲೇ ಕರೆಯುತ್ತಿದ್ದರು.

ಸಮುದ್ರ ತೀರದ ಎರಡು ಪರ್ವತಗಳ ಮಧ್ಯೆ ಪ್ರಪಾತದೊಳಗೆ ಅಡಗಿದ್ದ ಊರು ಟೊರ್ನವೆಂಟ್. ಬಡ ಕೃಷಿಕರೇ ವಾಸವಾಗಿದ್ದ ಪುಟ್ಟ ಹಳ್ಳಿ. ಅವರ ಮಧ್ಯೆ ಸ್ವಲ್ಪ ಅನುಕೂಲಸ್ಥನಾಗಿದ್ದವನು ಡೊಳ್ಳೊಟ್ಟೆ ಟೊಂಯಾನೇ ಅನ್ನಬಹುದು. ಅವನು ಬೇಯಿಸುತ್ತಿದ್ದ 'ಕೊನ್ಯಾಕ್'(ಸ್ಕಾಟ್ಲೆಂಡ್ ದೇಶ ಸ್ಕಾಚ್ ವಿಸ್ಕಿಗೆ ಹೇಗೆ ಪ್ರಸಿದ್ಧಿಯೋ, ಹಾಗೇ ಫ್ರಾನ್ಸ್ ದೇಶ ತನ್ನ ವಿಶಿಷ್ಟ ಬ್ರಾಂದಿ **Cognac**ಗೆ ಹೆಸರುವಾಸಿ) ಮದ್ಯದಿಂದಾಗಿ ಟೊರ್ನವೆಂಟ್ ಊರು ಸುತ್ತಮುತ್ತ ಹಳ್ಳಿಗಳಲ್ಲಿ ಪ್ರಸಿದ್ಧಿಯಾಗಿತ್ತು. ಹಾಗೆಯೇ ಟೊಂಯಾನೂ ಕೂಡ ಹೆಸರು ಮಾಡಿದ್ದ.

'ಲೇ ಮಕ್ಳಾ, ನನ್ನ 'ಕೊನ್ಯಾಕ್' ಹೊಟ್ಟೆಯೊಳಗೆ ಬಿಸಿ ಏರಿಸುವಂತೆ ಮನಸ್ಸೂ ಹಗುರ

